ಶ್ರೀ ಬಿ. ಬಸವಲಿಂಗಪ್ಪ (ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶಸಂಗೋಪನೆ ಸಚಿವರು).—

ಎ) ೫೧೫

ಬಿ) ೩೬ ಪಜೆನ್ಸಿಗಳು

ಸಿ) ೨೨ (ಬೆಂಗಳೂರು ನಗರದಲ್ಲಿ)

ಡಿ) ಇಲ್ಲ.

ಗ್ರೈನ್ ಮರ್ಚೆಂಟ್ಸ್ ಸಹಕಾರ ಬ್ಯಾಂಕ್ ಬಗ್ಗೆ

೪೧೭. ಶ್ರೀ ಎಂ. ನಾರಾಯಣ ಸ್ವಾಮಿ (ಚೇತಮಂಗಲ),—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ೮ನೇ ವಿಧಾನ ಸಭೆ ಅಧಿವೇಶನದಲ್ಲಿ ಸಹಕಾರ ಮಂತ್ರಿಗಳು ಗ್ರೈನ್ ಮರ್ಚೆಂಟ್ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು ಇದರಲ್ಲಿನ ನ್ಯೂನತೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ಕೊಟ್ಟಿರುವುದು ಸತ್ಯಾಂಶವೇ ?

ಬಿ) ಹಾಗಿದ್ದಲ್ಲಿ ಅದು ಈಗ ಯಾವ ಮಟ್ಟದಲ್ಲಿದೆ ?

ಸಿ) ಈ ಬ್ಯಾಂಕಿನ ಆಡಳಿತ ಮಂಡಳಿಯು ಕುಲ ಸಂಬಂಧಿಗಳನ್ನು ಷೇರುದಾರರನ್ನಾಗಿ ಸೇರಿಸಿಕೊಳ್ಳುವ ಮೂಲಕ ಒಂದು ಕುಟುಂಬದ ಬ್ಯಾಂಕಿಗೆ ಪರಿವರ್ತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಿ) ಸರ್ಕಾರವು ಈ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಳ್ಳಬಹುದು ಅದನ್ನು ದಯವಿಟ್ಟು ನಿಗದಿತ ಕಾಲ ಮಿತಿಯಲ್ಲಿ ತಿಳಿಸಿಕೊಳ್ಳಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಸಚಿವರು).—

ಎ) ೧೯೮೮ರ ೮ನೇ ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜ.

ಬಿ) ಆಶ್ವಾಸನೆ ಬಗ್ಗೆ ಬಂದ ದೂರಿನ ವಿಚಾರಣೆ ಮಾಡಲಾಗಿದೆ, ಶ್ರೀ ಅಶ್ವತ್ಥ್(ಅಶ್ವತ್ಥ್‌ಕುಮಾರ್) ಇವರ ಸದಸ್ಯತ್ವ ಅರ್ಜಿಯನ್ನು ಆಡಳಿತ ಮಂಡಳಿ ತಿರಸ್ಕರಿಸಲ್ಪಟ್ಟಿರುತ್ತದೆ. ಇದರ ಮೇಲೆ ತೊಂದರೆಗೊಳಪಟ್ಟ ಪಕ್ಷಕ್ಕೆ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರಲ್ಲಿ ಅಪೀಲು ಮಾಡಿರುವುದಿಲ್ಲ.

ಸಿ) ಇಲ್ಲ.

ಡಿ) ಉದ್ಭವಿಸುವುದಿಲ್ಲ.

ವಿಶ್ವನಾಥರೆಡ್ಡಿ ಮುದ್ನಾಳ್ ಆಯೋಗ

೧೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬಸವಣ್ಣನವರ ಐಕ್ಯ ಸ್ಥಳವಾದ ''ಕೂಡಲ ಸಂಗಮ'' ಅಭಿವೃದ್ಧಿಗಾಗಿ ನೇಮಿಸಿದ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ ಆಯೋಗದ ವರದಿಯನ್ನು ಸರ್ಕಾರ ಒಪ್ಪಿಕೊಂಡಿರುವುದೆ ?

ಬಿ) ಈ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು).—

ಎ) ಹೌದು.

ಬಿ) ಮುದ್ನಾಳ್ ಸಮಿತಿಯು ಶಿಫಾರಸ್ಸಿಗನುಗುಣವಾಗಿ ಕೂಡಲ ಸಂಗಮ ಸಂಕೀರ್ಣದ ನಕ್ಷೆಯನ್ನು ತಯಾರು ಮಾಡಲು ನಿವೃತ್ತ ವಿಶೇಷ ಕಾರ್ಯದರ್ಶಿಗಳಾದ ಶ್ರೀ ಎಸ್. ಜೆ. ಬಾಳೇಕುಂದ್ರಿ ಇವರ ಅಧ್ಯಕ್ಷತೆಯಲ್ಲಿ ಒಂದು ತಾತ್ಕಾಲಿಕ ಸಮಿತಿಯನ್ನು ದಿನಾಂಕ ೫-೫-೧೯೯೦ರ ಸರ್ಕಾರಿ ಆದೇಶದಲ್ಲಿ